CALLING ATTENTION TO MATTERS URGENT PUBLIC IMPORTANCES

(i) Re-Fire accident in the Office of the M.S E.B., Bangalore.

MR. M. MALLPPA (Birur):—I call the attention of the Chief Minister to the fire accident in the Office of Mysore State Electricity Board, Bangalore.

‡SRI VEERENDRA PATIL, (Chief Minister) On the morning of 14th instant at about 2-00 A.M. a fire broke out in the building housing the CentralZone Building Section of the Bangalore Circle Office of the Mysore State Electricity Board, which is adjacent to the Government Press on Vidhana Veedhi. The fire was first noticed at about 2-30 A.M. by the workmen on night shift of the Government Press and one of them brought to the notice of the Bangalore Circle Office watchman who was at that time at a different part of the building. On seeing the fire, the watchmen immediatly telephone to the Fire Brigade By the time the Fire Brigade engines arrived on the scene at 2-45 A M., the fire had spread far and wide in the billing section and the fire was completely brought under control with the help of additional fire engines by about 3-45 A.M.

A few cases of fraud in giving credit of the amounts due from the consumers had been noticed by the Board and special squads of audit staff had been posted recently to audit all the revenue accounts throughout the State and they were auditing the accounts. The fire accident occurred just after the work of auditing was taken up in this section. As a result of this fire, most of the lighting, heating and all-electric home ledger accounts of consumers belonging to the following localities have been destroyed :—

(1) Gandhinagar	(2) High Grounds
(3) Cottonpet	(4) Nagarthpet
(5) Cubbonpet	(6) Mamulpet

Fortunately, the room where the L T. and H.T. ledgers are kept was not involved and these ledgers are not damaged. It is feared that about 30 to 35 thousand ledger accounts belonging to the years 1967 68, 68-69 and 69-70 have been destroyed by this fire. Apart from this, some articles of furniture of the section have also been destroyed. The total loss to the Board on acconut of destruction of furniture and stationery and damage to the building may not be more than Rs. 25,000 but the records destroyed by the fire were invaluable.

The cause of the fire whether accidental or intentional, is not known. The Police Department is investigating the matter. A departmental enquiry is also being conducted by the Board to enquire whether

the prescribed procedure for the safe custody of records during non working hours was followed or not Steps are also being taken by the Board to reconstruct the records from the information to be derived from the field data and it is expected that most of the information will be collected and records built up as early as possib'e.

(ii) Re; Police attrocities at Ramdurg on people who observed hertal over border dispute.

ಶ್ರೀಮತಿ ಶಾರದವ್ವಪಟ್ಟಣ್:—ಮೈಸೂರು ವಿಧಾನ ಸಭೆಯ ನಿಯಮಾವಳಿಗಳ ೬೩ನೇ ನಿಯಮದ ಪ್ರಕಾರ ರಾಮದುರ್ಗ ತಾಲ್ಲೂಕಿನಲ್ಲಿ ನಡೆದಂತಹ ಕೆಲವು ಅನ್ಯಾಯಗಳ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:—ಮೈಸೂರು ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಕೇಂದ್ರ ಸರ್ಕಾರದವರ ಉದ್ದೇಶಿತ ನಿಲುವನ್ನು ಪ್ರತಿಭಟಿಸಲು ಮತ್ತು ಮಹಾಜನ್ ಆಯೋಗದ ಶಿಫಾರಸುಗಳನ್ನು ಕಾರ್ಯಾನ್ವಿತಗೊಳಿಸಬೇಕೆಂದು ಕೇಳಲು ೨ನೇ ಮಾರ್ಚ್ ೧೯೭೦ರಂದು ರಾಮದುರ್ಗದಲ್ಲಿ ಒಂದು ಹರತಾಳವನ್ನು ಆಚರಿಸಲಾಯಿತೆಂದು ವರದಿಯಾಗಿದೆ. ಸುಮಾರು ೩,೦೦೦ ಜನರ ಒಂದು ಮೆರವಣಿಗೆಯನ್ನು ಅಂದು ಹೊರಡಿಸಲಾಯಿತು. ಮೆರವಣಿಗೆಯಲ್ಲಿದ್ದವರ ಪೈಕಿ ಕೆಲವರು ರಾಜ್ಯದ ಸಾರಿಗೆ ಬಸ್ಸೊಂದಕ್ಕೆ ಕಲ್ಲೆಸೆದರು, ಒಂದು ಮರಾಠಿ ಹೆಸರಿನ ಬೋರ್ಡನ್ನು ತೆಗೆದುಹಾಕಿದರು, ಅಂಚೆ ಕಚೇರಿಯ ಮೇಲೆ ಧಾಳಿ ನಡೆಸಿದರು, ಟೆಲಿಫೋನ್ ತಂತಿಗಳನ್ನು ಕಳಗೆಳೆದರು ಮತ್ತು ಪೋಲೀಸ್ ಸ್ಟೇಷನನ್ನು ಸುಟ್ಟು ಹಾಕುವುದಾಗಿ ಹೆದರಿಸಿದರು. ಪೋಲೀಸರು ಜನರ ಗುಂಪನ್ನು ಚದುರಿಸಲು ಲಾಠಿಚಾರ್ಜ್ ಮಾಡಲು ಪ್ರಯತ್ನಿಸಿ ವಿಫಲರಾದರು. ಜನರ ಗುಂಪು ಹೆಚ್ಚು ಹೆಚ್ಚು ಉದ್ರೇಕಗೊಂಡು ಅತಿಕ್ರಮಿಸಿದ ಕಾರಣ ಮೊದಲೇ ತಕ್ಕ ಎಚ್ಚರಿಕೆ ಕೊಟ್ಟು ಆಮೇಲೆ ಗುಂಡು ಹಾರಿಸಬೇಕಾಯಿತು. ನಾಲ್ಕುಸಲ ಗುಂಡು ಹಾರಿಸಲಾಯಿತು. ಇದೆಂದ ಅನಪೇಕ್ಷಿತ ಪರಿಣಾಮ ಉಂಟಾಯಿತು. ಈ ಸಂಬಂಧದಲ್ಲಿ ನಾಲ್ಕು ಪ್ರಕರಣಗಳನು (ಕೇಸುಗಳನ್ನು) ರಿಜಿಸ್ಟರ್ ಮಾಡಲಾಯಿತು.

ಹತ್ತು ಮಂದಿ ಆಪಾದಿತರನ್ನು ೧೦ನೇ ಮಾರ್ಚ್ ೧೯೭೦ರಂದು ಖೈದು ಮಾಡಿ, ೧೧ನೇ ಮಾರ್ಚ್ ೧೯೭೦ರಂದು ರಾಮದುರ್ಗದ ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಮಾಡಲಾಯಿತು. ಪ್ರತಿದಿನ ಪೋಲೀಸ್ ಸ್ಟೇಷನ್ನಿಗೆ ಬಂದು ಹಾಜರಿ ಕೊಡುವಂತೆ ನಿರ್ದೇಶನ ಕೊಟ್ಟು ೧೭ನೇ ಮಾರ್ಚ್ ೧೯೭೦ರಂದು ಅವರನ್ನು ಜಾಮೀನಿನ ಮೇಲೆ ನ್ಯಾಯಾಲಯದಿಂದ ಬಿಡುಗಡೆ ಮಾಡಲಾಯಿತು. ಆಮೇಲೆ ಖೈದು ಮಾಡಲ್ಪಟ್ಟ ಬೇರೆ ನಾಲ್ಕು ಜನ ಆಪಾದಿತರೂ ಸಹ ಪೋಲೀಸ್ ಸ್ಟೇಷನ್ನಿಗೆ ನಿತ್ಯ ಹಾಜರಿ ಕೊಡಬೇಕೆಂಬ ಅದೇ ಷರತ್ತಿನ ಮೇಲೆ ಅವರನ್ನೂ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಆಪಾದಿತರ ಪರವಾಗಿ ಕೆಲವು ಆಡ್ವೋಕೇಟರುಗಳು ಸಲ್ಲಿಸಿದ ಅರ್ಜಿಯ ಮೇರೆಗೆ, ಪ್ರತಿ ದಿನ ಹಾಜರಿ ಕೊಡಬೇಕೆಂದು ವಿಧಿಸಲಾಗಿದ್ದ ಆದೇಶವನ್ನು ೧೭ನೇ ಮಾರ್ಚ್ ೧೯೭೦ರಂದು ತೆಗೆದುಹಾಕಲಾಯಿತು ಶ್ರೀ ಎಂ.ಎಸ್. ಪಟ್ಟಣ್ ಅವರು ೧೭ನೇ ಮಾರ್ಚ್ ೧೯೭೦ರಂದು ಉಪವಾಸ ಮುಷ್ಕರವನ್ನು ಪ್ರಾರಂಭಿಸಿದರು, ಆದರೆ ಅದನ್ನು ೧೮ನೇ ಮಾರ್ಚ್ ೧೯೭೦ರಂದು ಮುಕ್ತಾಯಗೊಳಿಸಿದರು.

ಪೋಲೀಸರು ಕಾನೂನಿಗನುಸಾರ ಕ್ರಮ ಕೈಕೊಂಡಿದ್ದಾರೆ. ಅವರು ಹೀಡೆ ಕೊಡುತ್ತಿದ್ದರೆಂಬ ಆಪಾದನೆ ನಿರಾಧಾರವಾಗಿದೆ.

ಶ್ರೀಮತಿ ಶಾರದವ್ವಪಟ್ಟಣ್:—ಹರತಾಳ ಮಾಡಿದ್ದು ತಾ॥ ೨ನೇ ಮಾರ್ಚ್ ೧೯೭೦ರಂದು ಆಯಿತು ಆದರೆ ಅವರನ್ನು ಹಿಡಿದು ಹಾಕಿದ್ದು ೧೦, ೧೧, ೧೭ನೇ ತಾರೀಖು ಈ ಮೂರು ದಿವಸ ಅವರನ್ನು ಜೈಲಿನಲ್ಲಿ ಇಟ್ಟಿದ್ದರು. ಇದಾದ ೫-೬ ದಿವಸಗಳ ನಂತರ ಪಟ್ಟಣ್‌ರವರು ಶಾಂತ ವಾತಾವರಣ ಇದೆ ಅಂತ ತೀರ್ಮಾನಿಸಿಕೊಂಡು ಅವರು ತಿರುಗಿ ಬೆಂಗಳೂರಿಗೆ ಬಂದ ತಕ್ಷಣ ಮುದ್ದಾಂಮಿಸ್ಕಿನ್ ಫೌಜುದಾರನೇ ಆ ಕಿರಾಣಿ ವರ್ತಕರ ಕೈಗೆ ಬೇಡಿ ಹಾಕಿ ಜನ ತಿರುಗಾಡವಂತಹ ಪೇಟೆಯ ರಸ್ತೆಯಲ್ಲಿ ಅವರನ್ನು ಮೆರವಣಿಗೆ ಮಾಡಿಸಿಕೊಂಡು ಬಂದು ಅವಮಾನ ಮಾಡಿದ್ದಾರೆ. ಹಾಗೆ ಅಪಮಾನ ಮಾಡಿ ಅವರಿಗೆ ಮಾನ ಭಂಗ ಮಾಡಿರುವಂತಹ ಆ ಮಿಸ್ಕಿನ್ ಫೌಜುದಾರನನ್ನು ಸಸ್‌ಪೆಂಡ್ ಮಾಡಬೇಕೆಂದು ಹೇಳುತ್ತೇನೆ ಸ್ವಾಮಿ.

ಶ್ರೀ ವೀರೇಂದ್ರ ಪಾಟೀಲ್;—ಮಾನ್ಯ ಸದಸ್ಯರಿಯರು ಪೋಲೀಸರು ಸ್ವಲ್ಪಮಟ್ಟಿಗೆ ಅಲ್ಲಿರುವಂತಹ ವರ್ತಕರ ಮೇಲೆ ಮತ್ತು ಎರಡನೇದವರ ಮೇಲೆ ಮಾನ ಭಂಗ ಮಾಡುವಂತೆ ವರ್ತನೆ ಮಾಡಿದ್ದಾರೆ ಅನ್ನುವಂತಹ ವಿಚಾರ ಹೇಳಿದ್ದಾರೆ ನಾನು ಮೊದಲೇ ಟ್ರಂಕ್ ಕಾಲ್ ಮಾಡಿ ಆ ರೀತಿ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಿದ್ದೆ. ಈಗಾಗಲೆ ಈ ಘಟನೆಗಳೆಲ್ಲಾದರ ಬಗ್ಗೆ ಕೇಸು ರಿಜಿಸ್ಟರ್ ಆಗಿ ಕೋರ್ಟಿನ ಮುಂದೆ ಹೋಗಿದೆ. ಆದ್ದರಿಂದ ಅವುಗಳ ಬಗ್ಗೆ ಪೂರ್ತಿಯಾಗಿ ವಿವರಣೆ ಕೊಡುವಂತಹ ಪರಿಸ್ಥಿತಿಯಲ್ಲಿ ನಾನು ಇಲ್ಲ.

ALLOTMENT OF DAYS TO TAKE UP NON-OFFICIAL BUSINESS IN THE HOUSE.

3-30 P.M

† ಶ್ರೀ ಎಚ್. ಎನ್. ನಂಜೇಗೌಡ(ನಂಜನಗೂಡು):—ನನ್ನ ಅಬ್‌ಜಕ್ಷನ್ ಒಂದಿದೆ ರೂಲ್ ೨೮(೧)ರ ಪ್ರಕಾರ ೧೪ ದಿವಸ ಸಭೆ ನಡೆದರೆ ಖಾಸಗಿ ಕಾರ್ಯಕಲಾಪಗಳಿಗೆ ೨-೩ ದಿವಸಗಳನ್ನಾದರೂ ಕೊಡಬೇಕು ಫೆಬ್ರವರಿ ೧೯ ರಿಂದ ಇಲ್ಲಿಯವರೆಗೆ ಸಭೆ ನಡೆದಿರುವಾಗ ಕನಿಷ್ಠ ೬ ಅಥವ ೭ ದಿವಸಗಳಾದರೂ ಖಾಸಗಿ ಕಾರ್ಯಕಲಾಪಗಳಿಗೆ ವಿನಿಯೋಗಿಸಬೇಕಾಗಿತ್ತು. ಆದರೆ ನಿನ್ನೆ ಒಂದೂವರೆ ಗಂಟೆ ಮಾತ್ರ ಕೊಟ್ಟಿದೆ. ಮುಂದಿನ ಅಧಿವೇಶನದಲ್ಲಿ ಅವಕಾಶ ಕೊಡುವುದಾಗಿ ಹೇಳಬಹುದು. ಆದರೆ ಹಿಂದಿನ ಅನುಭವ ನೋಡಿದರೆ ಪ್ರಿವಿಲೇಜಸ್ ಇಷ್ಯೂ ಮುಂತಾದವುಗಳ ಮೇಲೆ ಡಿಬೇಟ್ ಇನ್ನೂ ನಡೆಯುವುದರಲೇ ಇದೆ. ಬೇಕಾದಷ್ಟು ಖಾಸಗಿ ಕಾರ್ಯ ಕಲಾಪಗಳು ಬಾಕಿ ಇವೆ. ಜಲ್ಲಿಗಳೂ ಇವೆ. ಎಸ್ಟಿಮೇಟ್ಸ್ ಕಮಿಟಿ ವರದಿ ಇದೆ, ಪ್ರಿವಿಲೇಜಸ್ ಇಷ್ಯು ಮುಂತಾದ್ದಿವೆ, ಹೀಗೆ ಅನೇಕ ಖಾಸಗಿ ಕಾರ್ಯಕಲಾಪಗಳಿರುವಾಗ ಕೂಡ ಸರಕಾರಿ ಕಾರ್ಯಕಲಾಪಗಳಿಗೇ ಹೆಚ್ಚು ಅವಕಾಶ ಕೊಡಲಾಗುತ್ತಿದೆ. ಮತ್ತು ಆ ಸನ್ನಿವೇಶವು ಮುಂದುವರೆಯುತ್ತಿರುವುದನ್ನು ನೋಡಿದರೆ ಖಾಸಗಿ ಕಾರ್ಯಕಲಾಪಗಳಿಗೆ ಕೊಡಬೇಕಾದ ಗೌರವ ಕೊಡುತ್ತಿಲ್ಲ ಎಂಬ ಅಭಿಪ್ರಾಯ ಬರುವುದಕ್ಕೆ ಅವಕಾಶವಾಗಿದೆ: ನಿನ್ನೆ ತಾರೀಖಿನ ಈ ಅಧಿವೇಶನ ಮುಗಿಯುವುದೆಂದು ತಿಳಿದುಬಂದಿದೆ ನಮ್ಮ ಖಾಸಗಿ ಕಾರ್ಯಕಲಾಪಗಳಿಗೆ ಮುಂದಿನ ಅಧಿವೇಶನದವರೆಗೆ ಕಾಯಬೇಕಾಗಿಲ್ಲ. ಪ್ರಾರಂಭದಲ್ಲಿ ಮಾರ್ಚ್ ೩೦-೩೧ ರೊಳಗೆ ಬಜೆಟ್ ಪಾಸ್ ಆದನಂತರ ಖಾಸಗಿ ಕಾರ್ಯಕಲಾಪಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದರಿ. ಇನ್ನು ನಮಗೆ ೭ ದಿವಸ ಕೊಡಬೇಕಾಗಿತ್ತು, ಆದರೆ ಒಂದೂವರೆ ಗಂಟೆ ಮಾತ್ರ ಕೊಡಲಾಗಿದೆ. ಸರ್ಕಾರಕ್ಕೆ ಬಿಲ್ ಪಾಸ್ ಮಾಡಿಸಿಕೊಳ್ಳಲು ಆತುರವಾಗಿದೆ ಸರ್ಕಾರದ ಕೆಲಸ ಮಾಡುವುದಕ್ಕೆ ಮಾತ್ರ ನಾವು ಈ ಸಭೆಯಲ್ಲಿರುವುದಾದರೆ ಖಾಸಗಿ ಕಲಾಪಗಳನ್ನು ಡಿಲೀಟ್‌ಮಾಡಿ ನಮ್ಮ ಹಕ್ಕನ್ನು ಮೊಟಕುಮಾಡಿದರೆ ಅದೊಂದು ರೀತಿ ಪ್ರೈವೇಟ್‌ವೆಂಬರ್ ಬಿಸಿನಸ್‌ಗೆ ಆಸಕ್ತಿ ತೋರಿಸಬೇಕು, ಅಧ್ಯಕ್ಷರು ನಮಗೆ ರಕ್ಷಣೆ ಕೊಟ್ಟು ಸಹಾಯ ಮಾಡಬೇಕು. ಹಾಗೆ ಮಾಡದೆ ತರಾತುರಿಯಿಂದ ಮುಂದುವರೆಯುವುದಕ್ಕೆ ಅವಕಾಶ ಕೊಡಬಾರದು.

MR. SPEAKER:—There is no Point of Order. The Hon. Member wants allotment of time for Private Members' business. His request is genuine and will be certainly taken into consideration. I shall explain as to what happened at the proper time.

ಶ್ರೀ ಎಚ್. ಎನ್. ನಂಜೇಗೌಡ:— ಖಾಸಗಿ ಕಾರ್ಯಕಲಾಪಗಳಿಗೆ ಅವಕಾಶ ಕೊಡದಿದ್ದರೆ ನಾವೇಕೆ ಇಲ್ಲಿ ಕೂಡಬೇಕು

MR. SPEAKER:—It is the decision of the Business Advisory Committee; and not of the Speaker.

SRI H. N. NANJE GOWDA:—It was stated that the decision was taken unanimously in the Business Advisory Committee. But the Report is not before us. We are not a party to it.